# ಎಲ್ಲವೂ ಸುಳ್ಳು!



'ಮದುವೆಯೂ ಇಲ್ಲ, ಗರ್ಭವೂ ಇಲ್ಲ, ನಿಶ್ಚಿತಾರ್ಥವೂ ಇಲ್ಲ! ಸುಖಾಸುಮ್ಮನೇ ನಾನು ಗರ್ಭಿಣಿಯೆಂದು ಯಾವುದೋ ಫೋಟೋ ಹಾಕಿ ಓದುಗರನ್ನು ಮೂರ್ಖರನ್ನಾಗಿಸಬೇಡಿ' ಎಂದಿದ್ದಾಳೆ ಕರೀನಾ. ಸೈಫ್ ಮತ್ತು ಆಕೆಯ ಮದುವೆ ಮಾರ್ಚಿನಲ್ಲಿ ನಡೆಯುತ್ತದೆ ಎನ್ನುವ ಸುದ್ದಿಯನ್ನೂ ಆಕೆ ಸಾರಾಸಗಟಾಗಿ ಅಲ್ಲಗಳೆದಿದ್ದಾಳೆ.


ಕಳೆದ ವಾರವಿಡೀ ಕರೀನಾ, ಇಮ್ರಾನ್ ಖಾನ್ ಜತೆ ಸುತ್ತಾಡಿದ್ದಾಳೆ. ಸುತ್ತಾಡುತ್ತಿರುವುದು ಇಬ್ಬರೂ ಒಟ್ಟಿಗೆ ನಟಿಸಿರುವ 'ಏಕ್ ಮೈ ಔರ್ ಏಕ್ ತೂ' ಚಿತ್ರದ ಪ್ರಚಾರಕ್ಕಾಗಿ. 'ಮತ್ತೆ ಮಾರ್ಚಿನಲ್ಲಿ ಏನು ನಡೆಯುತ್ತದೆ?' ಎಂದು ಕೇಳಿದರೆ, 'ನಾನು ಮತ್ತು ಸೈಫ್ ಒಟ್ಟಿಗೆ ನಟಿಸಿದ ಏಜೆಂಟ್ ವಿನೋದ್ ಎಂಬ ಚಿತ್ರ ಬಿಡುಗಡೆಯಾಗುತ್ತದೆ, ಅಷ್ಟೆ' ಎಂದು ನಗುತ್ತಾಳೆ ಕರೀನಾ. ಒಟ್ಟಾರೆ ಸೈಫ್ ಮತ್ತು ಕರೀನಾಗೆ ಮದುವೆ ಮಾಡಿಸಬೇಕೆಂಬ ಮಾಧ್ಯಮದವರ ಬಯಕೆ ಸದ್ಯಕ್ಕೆ ಈಡೇರುವಂತೆ ಕಾಣಿಸುತ್ತಿಲ್ಲ.

ಸಾಮಾನ್ಯವಾಗಿ ಕರೀನಾ ಇತರ ನಟರ ಜತೆಗೆ ಅತ್ಯಂತ ನಿಕಟ ಬೆಡ್‌ರೂಂ ಸೀನ್‌ಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಸೈಫ್ ಜತೆಗೆ ಮಾತ್ರ ಇಂತಹ ದೃಶ್ಯಗಳಲ್ಲಿ ಭಾಗವಹಿಸುತ್ತಾಳೆ. ಆದರೆ ಇದೀಗ ನಿರ್ದೇಶಕ ಮಧುರ್ ಭಂಡಾರ್ಕರ್ ಕರೀನಾಳನ್ನು ಮನ ಒಲಿಸುವಲ್ಲಿ ಸಫಲನಾಗಿದ್ದಾನಂತೆ. ಆತನ 'ಹೀರೋಯಿನ್' ಚಿತ್ರದಲ್ಲಿ ನಾಯಕ ಅರ್ಜುನ್ ರಾಂಪಾಲ್ ಜತೆ ರೋಚಕ ಬೆಡ್‌ರೂಂ ದೃಶ್ಯಗಳಲ್ಲಿ ಭಾಗವಹಿಸಲು ಕರೀನಾ ಒಪ್ಪಿದ್ದಾಳಂತೆ! 'ಅತ್ಯಂತ ಕಲಾತ್ಮಕವಾಗಿ ಈ ದೃಶ್ಯಗಳನ್ನು ತೆಗೆಯಲಾಗುತ್ತದೆ. ಶೂಟಿಂಗ್ ವೇಳೆ ಅಗತ್ಯ ಇರುವ ನಾಲ್ಕೈದು ಸಿಬ್ಬಂದಿ ಬಿಟ್ಟರೆ ಕೋಣೆಯಲ್ಲಿ ಬೇರೆ ಯಾರೂ ಇರುವುದಿಲ್ಲ' ಎಂದೆಲ್ಲ ಮಧುರ್ ಹೇಳಿದ ಬಳಿಕ ಕರೀನಾ ಹೂಂ ಅಂದಿದ್ದಾಳಂತೆ!

'ಈ ಸುದ್ದಿ ಮಾತ್ರ ಸುಳ್ಳಿರಲಿಕ್ಕಿಲ್ಲ' ಎಂದು ಕರೀನಾಳ ಅಭಿಮಾನಿಗಳು ತಮಗೆ ತಾವೇ ಸಾಂತ್ವನ ಮಾಡಿಕೊಳ್ಳುತ್ತಿದ್ದಾರಂತೆ!

# ಮತ್ತೆ ದೀಪಿಕಾ

ದಕ್ಷಿಣದ ಸೂಪರ್‌ಸ್ಟಾರ್ ರಜನಿಕಾಂತ್ ಜತೆ ನಟಿಸುವ ದೀಪಿಕಾಳ ಕನಸು ಕೊನೆಗೂ ನನಸಾಗುತ್ತಿದೆ. ರಜನಿ ಮಗಳು ನಿರ್ಮಿಸುತ್ತಿರುವ ಹೊಸ ತಮಿಳು ಚಿತ್ರಕ್ಕೆ ದೀಪಿಕಾ ನಾಯಕಿಯಾಗಿ ಆಯ್ಕೆಯಾಗಿದ್ದಾಳೆ. ಕೋಚಡೈಯನ್ ಎಂಬ ರಜನಿಯ ಈ ಹೊಸ ಚಿತ್ರ ಇದೇ ಮೊದಲ ಬಾರಿಗೆ ಪೂರ್ಣ ತ್ರೀ ಡಿಯಲ್ಲಿ ಚಿತ್ರೀಕರಣ ಆಗಲಿದೆಯಂತೆ.



ಈ ಚಿತ್ರಕ್ಕೆ ನಾಯಕಿಯಾಗಿ ಕತ್ರೀನಾ ಕೈಫ್ ಆಯ್ಕೆ ಆಗಿದ್ದಾಳೆ ಎಂದು ಈ ಹಿಂದೆ ಸುದ್ದಿಯಾಗಿತ್ತು. ಆದರೆ ಆಕೆಯ ಬದಲಿಗೆ ದೀಪಿಕಾ ಬಂದಿರುವುದು ಎಲ್ಲರಲ್ಲೂ ಅಚ್ಚರಿ ಹುಟ್ಟಿಸಿದೆ. ಈ ಹಿಂದೆ ರಜನಿಯ ರಾಣಾ ಎಂಬ ಚಿತ್ರಕ್ಕೆ ದೀಪಿಕಾಳನ್ನು ಆಯ್ಕೆ ಮಾಡಲಾಗಿತ್ತು. ಆ ಚಿತ್ರದ ಶೂಟಿಂಗ್ ಕೂಡಾ ಶುರವಾಗಿತ್ತು. ಆದರೆ ಮಧ್ಯೆ ರಜನಿಕಾಂತ್ ತೀವ್ರ ಅನಾರೋಗ್ಯಕ್ಕೆ ಒಳಗಾಗಿ ಆಸ್ಪತ್ರೆ ಸೇರಿದ ಬಳಿಕ ಚಿತ್ರದ ಯೋಜನೆಯೇ ರದ್ದಾಯಿತು. ಆ ಚಿತ್ರವನ್ನು ಒಪ್ಪಿಕೊಂಡ ದೀಪಿಕಾ ಅದಕ್ಕಾಗಿ 'ಹೌಸ್‌ಫುಲ್–2' ಚಿತ್ರದ ಆಹ್ವಾನವನ್ನೂ ತಿರಸ್ಕರಿಸಿದ್ದಳು. ಈಗ ಆಕೆಗೆ ನ್ಯಾಯ ಸಿಕ್ಕಂತಾಗಿದೆ.

ಅಂದ ಹಾಗೆ ರಜನಿಯ ಈ ಚಿತ್ರದಲ್ಲಿ ತಮಿಳಿನ ಖ್ಯಾತ ನಟಿ ಸ್ನೇಹಾ ತಂಗಿಯ ಪಾತ್ರ ವಹಿಸಿದ್ದು, ಶೋಭನಾ ಮತ್ತು ಆದಿ ಇಬ್ಬರಿಗೂ ಪ್ರಮುಖ ಪಾತ್ರಗಳಿವೆಯಂತೆ. ಎ.ಆರ್.ರೆಹಮಾನ್ ಈಗಾಗಲೆ ಸಂಗೀತದ ಸಿದ್ಧತೆ ಮಾಡಿಕೊಂಡಿದ್ದಾರಂತೆ. ರಜನಿಯ ಚಿತ್ರ ಎಂದ ಮೇಲೆ ಅದು ವಿಶ್ವ ಮಟ್ಟದ ಸುದ್ದಿಯಾಗುವುದು ಖಚಿತ. ದೀಪಿಕಾ ಆ ಮಟ್ಟಿಗೆ ಅದೃಷ್ಟವಂತೆ ಎನ್ನಲಡ್ಡಿಯಿಲ್ಲ.

■ ಬಿಂದು

